ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	293 (2245)
2.	ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3.	ಉತ್ತರಿಸುವ ದಿನಾಂಕ	:	31.03.2020
4.	ಉತ್ತರಿಸುವ ಸಚಿವರು	:	ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಕೈಗಾರಿಕೆ ನಿವೇಶನ ಹಂಚಿಕೆಯ ಮಾನದಂಡಗಳೇನು; (ವಿವರ ನೀಡುವುದು)	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆಗೆ ಇರುವ ಮಾನದಂಡಗಳ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ.
ಆ.	ಗುತ್ತಿಗೆ ಆಧಾರದಲ್ಲಿ ಎಷ್ಟು ವರ್ಷಗಳ ಅವಧಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುತ್ತಿದೆ;	ಕೆ.ಐ.ಎ.ಡಿ.ಬಿ.ಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಐ 511 ಎಸ್‌ಪಿಕ್ಯೂ 2013, ದಿನಾಂಕ 07.08.2014, ಸಮಸಂಖ್ಯೆಯ ಆದೇಶ ದಿನಾಂಕ 07.07.2015 ಮತ್ತು 09.03.2017ರನ್ವಯ ಈ ಕೆಳಕಂಡಂತೆ ಗುತ್ತಿಗೆ ಆಧಾರದಲ್ಲಿ ಜಮೀನು ಹಂಚಿಕೆ ಮಾಡಲಾಗುತ್ತಿದೆ: 1. 2 ಎಕರೆ ಜಮೀನಿನವರೆಗೆ (ಎಂ.ಎಸ್.ಎಂ.ಇ. ಉದ್ದಿಮೆದಾರರಿಗೆ) 10 ವರ್ಷ ಗುತ್ತಿಗೆ ಮತ್ತು ಮಾರಾಟ ಆಧಾರದ ಹಂಚಿಕೆ). 2. 2 ಎಕರೆಗಿಂತ ಮೇಲ್ಪಟ್ಟ ಹಂಚಿಕೆಗೆ 99 ವರ್ಷ ಗುತ್ತಿಗೆ ಅವಧಿ. 3. ಸರ್ಕಾರಿ ಸಂಸ್ಥೆಗಳಿಗೆ/ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ/ ಪಿ.ಎಸ್.ಯು.ಗಳಿಗೆ 2 ವರ್ಷ ಗುತ್ತಿಗೆ ಮತ್ತು ಮಾರಾಟ ಆಧಾರದ ಹಂಚಿಕೆ. 4. ಏಕ ಘಟಕ ಸಂಕೀರ್ಣ ಯೋಜನೆಗಳಿಗೆ 15 ವರ್ಷ ಗುತ್ತಿಗೆ ಮತ್ತು ಮಾರಾಟ ಆಧಾರದ ಹಂಚಿಕೆ.

ಇ.	ನಿವೇಶನ ಕೋರಿ ಅರ್ಜಿ ಸಲ್ಲಿಸಿದವರಿಗೆ ಪಾರದರ್ಶಕ ನಿಯಮದಡಿ ನಿವೇಶನಗಳನ್ನು ಹಂಚಿಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೆ.ಐ.ಎ.ಡಿ.ಬಿ.ಯಲ್ಲಿ ನಿವೇಶನ ಕೋರಿ ಅರ್ಜಿ ಸಲ್ಲಿಸಿದವರಿಗೆ ಪಾರದರ್ಶಕವಾಗಿ ಜಮೀನು ಹಂಚಿಕೆ ಮಾಡಲಾಗುತ್ತಿದೆ.
ಈ.	ಹಾಗಾದಲ್ಲಿ ಎಷ್ಟು ಪ್ರಕರಣಗಳಲ್ಲಿ ಪಾರದರ್ಶಕ ನಿಯಮ ಮೀರಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; ಈ ರೀತಿ ಮಾಡಲು ಕಾರಣಗಳೇನು;	ಅಂತಹ ಯಾವುದೇ ಪ್ರಕರಣಗಳು ಇರುವುದಿಲ್ಲ.
ಉ.	ಹಂಚಿಕೆಯನ್ನು ಪಾರದರ್ಶಕವಾಗಿ ಮಾಡಲು ರೂಪಿಸಿದ ನಿಯಮಗಳೇನು?	ಕೆ.ಐ.ಎ.ಡಿ.ಬಿ.ಯಲ್ಲಿ ಪಾರದರ್ಶಕವಾಗಿ ನಿವೇಶನ ಹಂಚಿಕೆ ಮಾಡಲು ರೂಪಿಸಿರುವ ನಿಯಮಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಸಂಖ್ಯೆ: ಸಿಐ 105 ಐಎಪಿ(ಇ) 2020

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು

ಅನುಬಂಧ-1

ಕೈಗಾರಿಕಾ ನಿವೇಶನಗಳ ಹಂಚಿಕೆಯ ನಿಯಮಾವಳಿಗಳು

ಕೈಗಾರಿಕಾ ಉದ್ದೇಶಿತ ಯೋಜನೆಗಳಿಗೆ ಸರ್ಕಾರವು ಭೂಮಿಯನ್ನು ಕೆಐಎಡಿಬಿ ಮೂಲಕ ಕೈಗಾರಿಕೆಗಳಿಗೆ ಹಂಚಿಕೆ ಮಾಡಲು ಈ ಕೆಳಕಂಡ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ನಂತರ, ಮಂಡಳಿಯ ವೆಬ್ ಸೈಟ್ ನಲ್ಲಿ ಅನ್‌ಲೈನ್ ಅರ್ಜಿಗಳನ್ನು ಸಲ್ಲಿಸಬೇಕಾಗುವುದು.

ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ.	ರೂ. 500 ಕೋಟಿಗಳಿಗೂ ಮೀರಿದ ಬಂಡವಾಳ ಹೂಡಿಕೆಯ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು.
ಕರ್ನಾಟಕ ಸರ್ಕಾರದ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡುವ ಸಮಿತಿ.	ರಾಜ್ಯದಲ್ಲಿ ರೂ. 15 ಕೋಟಿಗಳಿಗಿಂತ ಹೆಚ್ಚಿನ ಮತ್ತು ರೂ. 500 ಕೋಟಿಗಳ ಒಳಗಿನ ಬಂಡವಾಳ ಹೂಡಿಕೆಯ ಕೈಗಾರಿಕಾ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು.
ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ.	ರೂ.15 ಕೋಟಿಗಳವರೆಗೆ ಬಂಡವಾಳ ಹೂಡುವ ಸಣ್ಣ ಕೈಗಾರಿಕಾ ಘಟಕಗಳ ಅರ್ಜಿಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು.

ನಿವೇಶನ ಕೋರಿ ನಿಗದಿತ ಅರ್ಜಿಗಳ ಜೊತೆಯಲ್ಲಿ ಈ ಕೆಳಕಂಡ ದಾಖಲೆಗಳೊಂದಿಗೆ ಕೆ.ಐ.ಎ.ಡಿ.ಬಿ. ಕಛೇರಿಗೆ ಅಥವಾ ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿಗೆ ಸಲ್ಲಿಸುವುದು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳಲ್ಲಿನ ಕೈಗಾರಿಕಾ ಪ್ರದೇಶಗಳಿಗೆ ನಿವೇಶನ ಕೋರುವ ಅರ್ಜಿಗಳನ್ನು ಕೆ.ಐ.ಎ.ಡಿ.ಬಿ ಕೇಂದ್ರ ಕಛೇರಿ/ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು ಇಲ್ಲಿಗೆ ಸಲ್ಲಿಸುವುದು.

. . . 2

- ವಿವರವಾದ ಯೋಜನಾ ವರದಿ ದ್ವಿಪ್ರತಿಯಲ್ಲಿ
- ಸಂಘದ ವಿವರಣಾ ಪತ್ರ ಮತ್ತು ನಿಯಮಾವಳಿಗಳು/ಪಾಲುಗಾರಿಕೆ ಕರಾರು ಪತ್ರ/ ಮೆಮೊರೆಂಡಮ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಷಿಯೇಷನ್ ಅನ್ವಯಿಸುವಂತೆ ದ್ವಿಪ್ರತಿಯಲ್ಲಿ.
- ಉದ್ಯೋಗ ಆಧಾರ್ ನೋಂದಣಿ ಪ್ರಮಾಣ ಪತ್ರ.
- ಭೂಮಿಯ ಉದ್ದೇಶಿತ ಉಪಯೋಗವನ್ನು ಸೂಚಿಸುವ ನಕ್ಷೆ.
- ಮುಂಗಡ ಠೇವಣಿಯಾಗಿ ಎಕರೆಯೊಂದಕ್ಕೆ ರೂ. 5000/–ಗಳು.
- ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ / ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ / ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಅನುಮೋದನಾ ಪತ್ರ.

ಕೈಗಾರಿಕಾ ನಿವೇಶನಗಳ ಹಣ ಪಾವತಿಸುವ ನಿಯಮಗಳು

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ಮೈಸೂರು, ಹಾಸನ, ದಾರವಾಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ)	ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 30 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು. ಆ. ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ ಒಳಗಾಗಿ ನಿವೇಶನದ ಬಾಕಿ 70% ಬೆಲೆಯನ್ನು ಪಾವತಿಸುವುದು.
ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ. (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ)	ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 20 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು. ಆ. ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ' ಒಳಗಾಗಿ ನಿವೇಶನದ ಬಾಕಿ 80% ಬೆಲೆಯನ್ನು ಪಾವತಿಸುವುದು.

. . . . 3

ಮಹಿಳಾ ಉದ್ದಿಮೆದಾರರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ.	ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 10 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು. ಆ. ನಿವೇಶನ ಹಂಚಿಕೆಯಾದ ದಿನದಿಂದ 180 ದಿನಗಳ ಒಳಗಾಗಿ ನಿವೇಶನದ ಬಾಕಿ 90% ಬೆಲೆಯನ್ನು ಪಾವತಿಸುವುದು.
ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಅಂಗವಿಕಲ ಉದ್ದಿಮೆದಾರರು ಮತ್ತು ಮಾಜಿ ಸೈನಿಕರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ.	ಇ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 20/30 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು. ಈ. ನಿವೇಶನ ಹಂಚಿಕೆಯಾದ ದಿನದಿಂದ 6 ಸಮ ತ್ರೈಮಾಸಿಕ ಕಂತುಗಳಲ್ಲಿ ನಿವೇಶನದ ಬಾಕಿ ಶೇ.80/70 ಬೆಲೆಯನ್ನು ಪಾವತಿಸುವುದು.
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರು	ಉ. ಮಂಡಳಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವ ಜಮೀನಿನ ಹಂಚಿಕೆ ದರದಲ್ಲಿ ಶೇ.50ರ ರಿಯಾಯಿತಿಯನ್ನು ನೀಡಲಾಗುವುದು ಮತ್ತು ಈ ಮೊತ್ತವನ್ನು ಸರ್ಕಾರದಿಂದ SCP/TSP ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಊ. ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಂದ ರಿಯಾಯಿತಿ ನೀಡಿದ ನಿವೇಶನ ಹಂಚಿಕೆ ದರದ ಮೇಲೆ ಶೇ.10ರ ಹಣವನ್ನು ಅರ್ಜಿಯ ಜೊತೆಗೆ ಪ್ರಾರಂಭಿಕ ಠೇವಣಿಯನ್ನಾಗಿ ಪಾವತಿಸಿಕೊಂಡು ಹಂಚಿಕೆ ಪತ್ರ ನೀಡುವುದು ಮತ್ತು ರಿಯಾಯಿತಿ ನೀಡಿದ ನಿವೇಶನ ಹಂಚಿಕೆ ದರದ ಬಾಕಿ ಶೇ.40ರ ಹಣವನ್ನು ಹಂಚಿಕೆ ಪತ್ರದ ದಿನಾಂಕದಿಂದ 180 ದಿವಸಗಳ ಒಳಗಾಗಿ ಪಾವತಿಸಿಕೊಳ್ಳುವುದು.

	ಖ. ರಿಯಾಯಿತಿ ನೀಡಿದ ನಿವೇಶನ ಹಂಚಿಕೆ ದರದ ಬಾಕಿ ಶೇ. 50 ರ ಹಣವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಶೇ.9.50 ರಷ್ಟು ಬಡ್ಡಿಯೊಂದಿಗೆ ಸ್ವಾಧೀನಪತ್ರ ನೀಡಿದ ದಿನಾಂಕದಿಂದ ವಸೂಲಾತಿ ಮಾಡಿಕೊಳ್ಳುವುದು ಮತ್ತು ಸದರಿ ಮೊತ್ತವನ್ನು ನಿಗದಿತ ಅವಧಿಯಲ್ಲಿ ಪಾವತಿಸುವ ಕುರಿತು ಉದ್ದಿಮೆದಾರರಿಂದ ಸೂಕ್ತ ಮುಚ್ಚಳಿಕೆ ಪತ್ರ ಪಡೆದುಕೊಳ್ಳಲಾಗುವುದು.

ಹಂಚಿಕೆಯಾದ ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ ನಂತರ ಹಂಚಿಕೆಯ ದೃಢೀಕರಣದ ಪತ್ರವನ್ನು ನೀಡಿ ನಿವೇಶನದ ಸ್ವಾಧೀನ ಪತ್ರ ನೀಡಲಾಗುವುದು. 2 ಎಕರೆ ವಿಸ್ತೀರ್ಣದ ವರೆಗೆ ಹಂಚಿಕೆ ಪಡೆದ ಎಂ.ಎಸ್.ಎಂ.ಇ. ಉದ್ದಿಮೆದಾರರಿಗೆ 10 ವರ್ಷಗಳ ಗುತ್ತಿಗೆ ಅವಧಿಗೆ ಗುತ್ತಿಗೆ ಹಾಗೂ ಮಾರಾಟ ಒಪ್ಪಂದ ಕರಾರು ಪತ್ರ ನೆರವೇರಿಸಲಾಗುವುದು. 2 ಎಕರೆ ವಿಸ್ತೀರ್ಣದ ಮೇಲ್ಪಟ್ಟು ಹಂಚಿಕೆ ಪಡೆದ ಉದ್ದಿಮೆದಾರರಿಗೆ 99 ವರ್ಷಗಳ ಅವಧಿಗೆ ಗುತ್ತಿಗೆ ಕರಾರು ಪತ್ರ ನೆರವೇರಿಸಿಕೊಡಲಾಗುವುದು. ಹಾಗೂ ಏಕ ಘಟಕ ಸಂಕೀರ್ಣ ಯೋಜನೆಗಳಿಗೆ ಜಮೀನು ಹಂಚಿಕೆಯನ್ನು 15 ವರ್ಷಗಳ ಗುತ್ತಿಗೆ ಮತ್ತು ಕ್ರಯದ ಆಧಾರದ ಮೇಲೆ ಗುತ್ತಿಗೆ ಕರಾರು ಪತ್ರ ನೆರವೇರಿಸಿಕೊಡಲಾಗುವುದು.